

# ಅಕ್ಕನ ರಕ್ಷಣೆಗೆ ನಿಲ್ಲುವ ಬಜಾರಿ

## ಮೇಘಶ್ರೀ ಎಸ್.ವಿ.
ಸ್ಟಾರ್ ಸುವರ್ಣದ
'ಜೀವ ಹೂವಾಗಿದೆ'ಯ ಮೀರಾ

◆ **ನೋಡಲು ಚಿಕ್ಕವರಂತೆ ಕಾಣಿಸುತ್ತೀರಿ; ದೊಡ್ಡ ಪಾತ್ರ ನಿರ್ವಹಿಸುತ್ತೀರಿ. ಅದರ ಸವಾಲುಗಳು ಹೇಗಿರುತ್ತವೆ?**

ಮೊದಲು ಕ್ಯಾಮೆರಾ ಎದುರಿಸುವುದು ತುಂಬ ಭೀತಿಯ ಸಂಗತಿಯಾಗಿತ್ತು. ಶಾಸ್ತ್ರೀಯ ನೃತ್ಯವನ್ನು ಅಭ್ಯಾಸ ಮಾಡಿದ್ದೇನೆ. ಹಲವಾರು ಕಾರ್ಯಕ್ರಮಗಳನ್ನೂ ನೀಡಿದ್ದೇನೆ. ಅಲ್ಲಿ ನನಗೆ ಯಾವ ಅಳುಕೂ ಇರುತ್ತಿರಲಿಲ್ಲ. ಆದರೆ, ಕ್ಯಾಮೆರಾ ಕಣ್ಣು ನನ್ನನ್ನು ಬೆಚ್ಚಿಸಿತ್ತು. ವೈಯಕ್ತಿಕವಾಗಿ ಹಿಂಜರಿಕೆಯ ಸ್ವಭಾವದ ಹುಡುಗಿ ನಾನು. ಪಾತ್ರದಲ್ಲಿ ತುಂಬ ಬೋಲ್ಡ್. ಯಾರಿಗೂ ಹೆದರದೆ ಎದುರುತ್ತರ ನೀಡುವ ಮೀರಾ, ಬಾಯಿಗೆ ಬಂದಿದ್ದನ್ನು ಮುಲಾಜಿಲ್ಲದೆ ಹೇಳುತ್ತಾಳೆ. ಅದಕ್ಕೊಂದಿಷ್ಟು ತಯಾರಿ ಬೇಕಿತ್ತು. ಆರಂಭದಲ್ಲಿ ನಿರ್ದೇಶಕರು ಹೇಳಿ ಮಾಡಿಸುತ್ತಿದ್ದರು. ಅದನ್ನು ಕಲಿಯಲು ನಾನು ಹಳೆಯ ಧಾರಾವಾಹಿ ಮತ್ತು ಸಿನಿಮಾಗಳಲ್ಲಿ ಬಜಾರಿ ಪಾತ್ರಗಳನ್ನು ಮತ್ತೆ ಮತ್ತೆ ನೋಡ್ತಾ ಇದ್ದೆ. ಕನ್ನಡಿ ಮುಂದೆ ಅನುಕರಿಸುತ್ತಿದ್ದೆ. ಅಮ್ಮ ನನ್ನ ಅಭಿನಯವನ್ನು ನೋಡಿ ತಿದ್ದುತ್ತಿದ್ದರು.

◆ **ನಿಮ್ಮ ಪರಿಚಯವನ್ನು ಹೇಳಿ...**

ಚಿಕ್ಕವಯಸ್ಸಿನಿಂದಲೂ ಅಮ್ಮ ಕಮಲಾ ನನ್ನ ಕಲಿಕೆ ಮತ್ತು ಬದುಕಿನ ಉಸ್ತುವಾರಿಕೆ ಮಾಡುತ್ತಿದ್ದರು. ನೃತ್ಯದ ಜೊತೆ ವೀಣೆ ಮತ್ತು ಗಾಯನವನ್ನು ಕಲಿತಿದ್ದೇನೆ. ಅದು ತಾಯಿಯ ಒತ್ತಾಸೆಯಿಂದಲೇ ಹೊರತು ಸ್ವಯಂ ಉತ್ಸಾಹದಿಂದ ಅಲ್ಲ. ಅಪ್ಪ ವಿಜಯ್ ಕುಮಾರ್ ಸರ್ಕಾರಿ ಉದ್ಯೋಗಿ. ಅವರು ಡಾನ್ಸ್, ಹಾಡಿಗಿಂತ ಶಿಕ್ಷಣ ಮುಖ್ಯ. ಅದಕ್ಕೆ ಹೆಚ್ಚು ಒತ್ತು ಕೊಡು ಎಂದು ಹೇಳುತ್ತಿದ್ದರು. ಈಗ ಅವರೂ ಖುಷಿಪಡ್ತಾ ಇದ್ದಾರೆ. ಆಗಾಗ ತಂದೆಗೆ ವರ್ಗಾವಣೆ ಆಗುತ್ತಿತ್ತು. ಕೆಲವು ವರ್ಷ ದೇವನಹಳ್ಳಿಯಲ್ಲಿದ್ದೆವು. ಈಗ ನೆಲಮಂಗಲದಲ್ಲಿ ಇದ್ದೇವೆ.

ದೇವನಹಳ್ಳಿಯಲ್ಲಿ ಡಾನ್ಸ್ ಅರ್ಧ ಕಲಿತಿದ್ದೆ. ನೆಲಮಂಗಲಕ್ಕೆ ಬಂದ ನಂತರ ನನ್ನ ಡಾನ್ಸ್ ಟೀಚರ್ ಸೋನಿಯಾ ಪದುವಾಳ್ ಸಂಗೀತವನ್ನೂ ಕಲಿಸಿದರು. ಅವರು ಮೂಲತಃ ಕೇರಳದವರು. ಶಿವಮೊಗ್ಗದಲ್ಲಿ ಬೆಳೆದಿದ್ದಾರೆ. ನೆಲಮಂಗಲಕ್ಕೆ ಸೊಸೆಯಾಗಿ ಬಂದಿದ್ದರು. ನನಗೆ ಅವರು ಶಿಕ್ಷಕಿಯಾಗಿ ಸಿಕ್ಕರು. ಓದಿದ್ದು ಪಿಯುಸಿ ನಂತರ ಡಿಪ್ಲೊಮಾ. ಆದರೆ ನೃತ್ಯವನ್ನು ವೃತ್ತಿಯಾಗಿ ತೆಗೆದುಕೊಳ್ಳಬೇಕು ಎಂದುಕೊಂಡಿದ್ದೆ. ಅದಕ್ಕೆ ತಿರುವು ನೀಡಲು ಕಾರಣ ಆಗಿದ್ದು ಸುವರ್ಣದ 'ನೀನಾ ನಾನಾ' ಎನ್ನುವ ಚರ್ಚಾ ಕಾರ್ಯಕ್ರಮ. ಅದರ ಚಿತ್ರೀಕರಣ ನೆಲಮಂಗಲದಲ್ಲಿ ಇತ್ತು. ಅದರಲ್ಲಿ ನಾನು ಭಾಗವಹಿಸಿದ್ದೆ. 'ಉತ್ತರ ಭಾರತೀಯ ಹುಡುಗಿಯರು ಮತ್ತು ದಕ್ಷಿಣ ಭಾರತೀಯ ಹುಡುಗಿಯರು' ಎನ್ನುವ ಚರ್ಚೆ. ಅಲ್ಲಿ ಒಬ್ಬರು ಪರಿಚಯ ಆಗಿದ್ದರು. 'ಸೀರಿಯಲ್ ಮಾಡಲು ಆಸಕ್ತಿ ಇದೆಯಾ?' ಅಂದ್ರು. 'ನಾನೇಕೆ ನಟನೆಯನ್ನು ಮಾಡಬಾರದು' ಎನ್ನುವ ಪ್ರಶ್ನೆ ಅಂದು ಹುಟ್ಟಿಕೊಂಡಿದ್ದರ ಪರಿಣಾಮ ನಟನೆಯನ್ನು ಬೆನ್ನು ಹತ್ತಿದೆ. ತೆಲುಗಿನಲ್ಲಿ 'ವ್ಯಾಪಾರಂ' ಕಿರುಚಿತ್ರ ಮಾಡಿದೆ. ಅದಾದ ಮೇಲೆ 'ಅಡಚಣೆಗಾಗಿ ಕ್ಷಮಿಸಿ' ಸಿನಿಮಾದಲ್ಲಿ ನಟಿಸಿದೆ. ತುಂಬ ಆಡಿಷನ್ ನೀಡ್ತಾ ಇದ್ದೆ. ನೋಡಲು ಪುಟ್ಟ ಹುಡುಗಿ ರೀತಿ ಕಾಣ್ತೀನಿ ಅನ್ನೋ ಕಾರಣಕ್ಕೆ ಅವಕಾಶ ಸಿಗ್ತಾ ಇರಲಿಲ್ಲ. ಆದರೆ ನನ್ನ ಪ್ರಯತ್ನವನ್ನು ಬಿಟ್ಟರಿಲಿಲ್ಲ. ಸಾಮಾಜಿಕ ಮಾಧ್ಯಮದಲ್ಲಿ ನನ್ನ ಚಿತ್ರನವನ್ನು ನೋಡಿ ರಂಜಿನಿ ರಾಘವನ್ 'ಹೊಸ ಪ್ರಾಜೆಕ್ಟ್ ಇದೆ ಬಾ' ಎಂದು ಕರೆದರು. ಅದಕ್ಕೆ ಆಡಿಷನ್ ನೀಡಿದೆ. ಮತ್ತೆ ರಿಜೆಕ್ಟ್ ಆದೆ. ಕಲರ್ಸ್‌ನಲ್ಲಿ 'ಇಷ್ಟದೇವತೆ'ಯ ನಾಯಕಿಯ ಪಾತ್ರ ಬದಲಾಗಿತ್ತು. ಅದನ್ನು ನಿರ್ವಹಿಸಿದ್ದೆ. ಬಿಗ್‌ಬಾಸ್ ಕಾರಣಕ್ಕೆ ಅದು ಬೇಗ ನಿಂತಿತು. ಫೋನಿನಲ್ಲಿಯೇ ಈ ಪಾತ್ರಕ್ಕೆ ಆಡಿಷನ್ ನೀಡಿದೆ. ಅವತ್ತು ನನಗೆ ಹುಷಾರಿರಲಿಲ್ಲ. ಅರ್ಜೆಂಟ್ ಇದೆ ಎಂದು ಫೋನಿನಲ್ಲಿ ಸ್ಕ್ರಿಪ್ಟ್ ಕಳುಹಿಸಿದರು. ಫೋನಿನಲ್ಲಿಯೇ ವಿಡಿಯೊ ಮಾಡಿ ಕಳಿಸಿದೆ. ಅದಾಗಿ ಎರಡನೇ ದಿನಕ್ಕೇ ಚೆನ್ನಪಟ್ಟಣಕ್ಕೆ ಚಿತ್ರೀಕರಣಕ್ಕೆ ಹೋಗಬೇಕಾಯಿತು.

◆ **ಕಥೆಯಲ್ಲಿ ಮೀರಾಳ ಪಾತ್ರ ಏನು?**

ಅಕ್ಕ ಬೆಂಗಳೂರಿನಲ್ಲಿ ಶಿಕ್ಷಣ ಮುಗಿಸಿಕೊಂಡು ಬಂದಿದ್ದಾಳೆ. ಅವಳು ಹುಡುಗನೊಬ್ಬನನ್ನು ಪ್ರೀತಿ ಮಾಡಿದ್ದಾಳೆ. ಅದಕ್ಕೆ ಇಬ್ಬರ ಮನೆಯಲ್ಲೂ ಪ್ರತಿರೋಧ ಇರುತ್ತದೆ. ಕುಟುಂಬ ಒಂದಾಗಬಹುದು ಎಂದು ಅವರು ಪ್ರೀತಿಯನ್ನು ಮುಂದುವರಿಸುತ್ತಾರೆ. ಇನ್ನೇನು ಮದುವೆಯ ಹೊತ್ತಿಗೆ ಆ ಹುಡುಗ ನಿಧನ ಹೊಂದುತ್ತಾನೆ. ಬೇರೆ ಹುಡುಗನ ಜೊತೆ ಮದುವೆಯಾಗುತ್ತದೆ. ಆಕೆಗೆ ಇಷ್ಟ ಇರುವುದಿಲ್ಲ. ಸೌಮ್ಯ ಸ್ವಭಾವದ ಆಕೆ ಮನೆಯವರ ಒತ್ತಾಯಕ್ಕೆ ಮದುವೆ ಆಗುತ್ತಾಳೆ. ಗಂಡನ ಮನೆಯಲ್ಲಿ ಕಿರಿಕಿರಿ ಮಾಡುತ್ತಾರೆ. ಆಕೆಯ ಗಂಡನ ತಮ್ಮನನ್ನು ನಾನು ಪ್ರೀತಿ ಮಾಡುತ್ತಿದ್ದೇನೆ. ನನ್ನ ಉದ್ದೇಶ ಏನಪ್ಪಾ ಅಂದರೆ ಅಲ್ಲಿ ಹೋದರೆ ನನ್ನ ಅಕ್ಕನ ರಕ್ಷಣೆಗೆ ನಿಲ್ಲಬಹುದು. ಅಲ್ಲಿ ನಾಗವೇಣಿ, ಅಕ್ಕನಿಗೆ ಸಿಕ್ಕಾಪಟ್ಟೆ ತೊಂದರೆ ಕೊಡುತ್ತಾಳೆ. ಅದನ್ನು ತಡೆಯಲು ನನ್ನಂತಹ ಬಜಾರಿಯ ಪ್ರವೇಶ ಆಗುತ್ತದೆ ಎಂದೆನಿಸುತ್ತದೆ.

◆ **ಮುಂದೆ ನಿಮ್ಮ ಗುರಿ ಏನಿದೆ?**

ನಿರ್ದಿಷ್ಟವಾಗಿ ಯಾವ ಯೋಚನೆಯನ್ನೂ ಮಾಡಿಲ್ಲ. ನಟಿ ಆಗಬೇಕು ಎಂದು ಯೋಚಿಸಿ ಬಂದಿದ್ದೇನೆ. ಇಲ್ಲೇ ಮುಂದುವರಿಯಬೇಕು. ಇಲ್ಲಿ ನನಗೊಂದು ಐಡೆಂಟಿಟಿ ಸಿಗಬೇಕು. ಜನ ಗುರುತಿಸಬೇಕು. ಮುಂದೆ ಡಾನ್ಸ್ ಕೂಡ ಮುಂದುವರಿಸುತ್ತೇನೆ. ಭರತನಾಟ್ಯ, ಕೂಚಿಪುಡಿ ಕಲಿತಿದ್ದೇನೆ. ಕೂಚಿಪುಡಿಯಲ್ಲಿ ಗಿನ್ನೆಸ್ ಮತ್ತು ಲಿಮ್ಕಾ ರೆಕಾರ್ಡ್ ಮಾಡಿದ್ದೇನೆ. ನೃತ್ಯವನ್ನೂ ಅಭ್ಯಾಸ ಮಾಡಿಕೊಂಡು ಹೋಗಬೇಕು. ಅಭಿನಯ ಮತ್ತು ನೃತ್ಯ ಒಂದಕ್ಕೊಂದು ಪೂರಕವಾಗುತ್ತವೆ. ಎರಡನ್ನೂ ನಿಭಾಯಿಸಿಕೊಂಡು ಹೋಗುತ್ತೇನೆ.

■ **ರಾಘವೇಂದ್ರ ಕೆ.**